ಸಂಖ್ಯೆ. ಇಡಿ/ಕೆಇಎ/ಪತ್ರಿಕಾ ಪ್ರಕಟಣೆ/2019 ದಿನಾಂಕ 15.06.2019

**ಲೋಕೋಪಯೋಗಿ ಇಲಾಖೆಯ ನೇಮಕಾತಿ-ಸ್ಪರ್ಧಾತ್ಮಕ ಪರೀಕ್ಷೆಗೆ ಲಿಪಿಕಾರರ ಸೌಲಭ್ಯ**

1. ಲೋಕೋಪಯೋಗಿ ಇಲಾಖೆಯಲ್ಲಿನ ನೇಮಕಾತಿ ಸಂಬಂಧ ದಿನಾಂಕ 22.06.2019 ರಿಂದ 24.06.2019ರವರೆಗೆ ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗೆ ಲಿಪಿಕಾರರ ಸೌಲಭ್ಯವನ್ನು ಸರ್ಕಾರದ ಆದೇಶ ಸಿಆಸುಇ 74 ಸೆನೆನಿ 2006 ಬೆಂಗಳೂರು ದಿನಾಂಕ 30.10.2007ರನ್ವಯ (ಆದೇಶದ ಪ್ರತಿಯನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ) ಪಡೆಯಬಹುದಾಗಿದೆ.
2. ಈಗಾಗಲೇ ಆನ್‌ಲೈನ್ ಅರ್ಜಿಯಲ್ಲಿ ಅಂಧ/ದೃಷ್ಟಿ ಮಾಂದ್ಯತೆಯನ್ನು ದಾಖಲಿಸಿರುವ ಅಭ್ಯರ್ಥಿಗಳು ಲಿಪಿಕಾರರ ಸೌಲಭ್ಯ ಪಡೆಯಲು ಇಚ್ಛಿಸಿದ್ದಲ್ಲಿ ಮಾತ್ರ ದಿನಾಂಕ 17.06.2019 ಹಾಗು 18.06.2019 ರಂದು ಪ್ರಾಧಿಕಾರಕ್ಕೆ ಹಾಜರಾಗಿ, ಪ್ರಾಧಿಕಾರವು ನೀಡುವ ಪತ್ರದಂತೆ ಮಿಂಟೋ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಯನ್ನು ನಡೆಸಬೇಕಾಗುತ್ತದೆ.
3. ಪ್ರಾಧಿಕಾರದ ವೆಬ್‌ಸೈಟಿನಿಂದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಲಿಪಿಕಾರರ ವಿವರಗಳನ್ನು ಭರ್ತಿ ಮಾಡಿ ಲಿಪಿಕಾರನ ಫೋಟೋ ಅಂಟಿಸಿ ಕೊಂಡು ತಮ್ಮೊಡನೆ ಇಟ್ಟುಕೊಳ್ಳಬೇಕು.
4. ಅಂಧ/ದೃಷ್ಟಿ ಮಾಂದ್ಯ ಅಭ್ಯರ್ಥಿಯು ಸದರಿ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶ ಪತ್ರ, ಆನ್‌ಲೈನ್ ಅರ್ಜಿ ಪ್ರತಿ, ಗುರುತಿನ ಚೀಟಿ, ಎಲ್ಲಾ ವೈದ್ಯಕೀಯ ದಾಖಲೆಗಳೊಂದಿಗೆ ವೈದ್ಯಕೀಯ ತಪಾಸಣೆಗೆ ಹಾಜರಾಗತಕ್ಕದ್ದು.
5. ವೈದ್ಯಕೀಯ ತಪಾಸಣೆಯಲ್ಲಿ ಅರ್ಹತೆ ಪಡೆಯುವ ಅಭ್ಯರ್ಥಿಗಳು ಮಾತ್ರ ಲಿಪಕಾರರೊಂದಿಗೆ ಭರ್ತಿ ಮಾಡಿದ ನಮೂನೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಲ್ಲಿಸಿ, ಪ್ರಾಧಿಕಾರದಿಂದ ಪ್ರವೇಶ ಪತ್ರವನ್ನು ಪಡೆಯಬಹುದು.
6. ನಂತರ ಪರೀಕ್ಷೆಯ ದಿನದಂದು ಒಂದು ಗಂಟೆ ಮುಂಚಿತವಾಗಿ ನಮೂನೆ ಮತ್ತು ಲಿಪಿಕಾರರೊಂದಿಗೆ ತಮ್ಮ ಪರೀಕ್ಷಾ ಕೇಂದ್ರದ ಉಪಮುಖ್ಯ ಅಧೀಕ್ಷಕರಲ್ಲಿ ವರದಿ ಮಾಡಿಕೊಳ್ಳಬೇಕು.

ಕಾರ್ಯನಿರ್ವಾಹಕ ನಿರ್ದೇಶಕರು